# 1

# ಬೈಬಲು ದೇವರ ವಾಕ್ಯವಾಗಿದೆ

ಬೈಬಲು ದೇವರ ವಾಕ್ಯವೆಂದು ಹೇಳಿಕೊಳ್ಳುತ್ತದೆ. ಅದರ ಪುಟಗಳಲ್ಲಿ ಎರಡು ಸಾವಿರಕ್ಕಿಂತಲೂ ಹೆಚ್ಚು ಸಲ "ಕರ್ತನು ಹೇಳಿದ್ದಾನೆ" ಎಂಬ ವಿವಿಧವಾದ ಹೇಳಿಕೆಗಳನ್ನು ಕಂಡುಕೊಳ್ಳುತ್ತೇವೆ. "ದೇವರು ... ಮಾತಾಡಿದ್ದಾನೆ" ಎಂದು ಇಬ್ರಿಯ 1:1, 2 ನಮಗೆ ಹೇಳುತ್ತದೆ. "ಮನುಷ್ಯರು ಪರಿಶುದ್ಧಾತ್ಮ ಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತಾಡಿದರು" ಎಂದು 2 ಪೇತ್ರ 1:21ಬಿ ಹೇಳುತ್ತದೆ. ಪರಿಶುದ್ಧ ಲೇಖನವು ದೈವ ಪ್ರೇರಿತವಾದವುಗಳಾಗಿವೆ. "ದೇವರ ಮನುಷ್ಯನು ಸನ್ನದ್ಧನಾಗಿ ಪ್ರತಿಸತ್ಕಾರ್ಯಕ್ಕೆ ಪರಿಪೂರ್ಣನಾಗಿ ಸಿದ್ಧನಾಗಿರಲು ದೈವಪ್ರೇರಿತವಾದ ಪ್ರತಿಯೊಂದು ಲೇಖನವು, ಉಪದೇಶಕ್ಕೂ, ಖಂಡನೆಗೂ, ತಿದ್ದುಪಾಟಿಗೂ ನೀತಿಶಿಕ್ಷೆಗು ಪ್ರಯೋಜನಕರವಾಗಿದೆ" (2 ತಿಮೋಥೆ 3:16, 17).

ಬೈಬಲು ಒಳ್ಳೆಯ ಪುಸ್ತಕವಾಗಿದೆ, ಆದರೆ ದೇವರಿಂದ ಪ್ರೇರಿತವಾಗಿರುವುದಿಲ್ಲ ಎಂದು ಕೆಲವರು ನಂಬುತ್ತಾರೆ. ಇದು ಹಾಗಿರಲಾರದು: ಅದು ದೇವರ ವಾಕ್ಯವಾಗಿರದಿದ್ದರೆ, ಆಗ ಅದು ಸುಳ್ಳು ನಿರೂಪಣೆಯಾಗಿರುವುದು.

ಬೈಬಲು ದೇವರ ಪ್ರೇರಿತ ವಾಕ್ಯವಾಗಿದೆಯೆಂದು ನಂಬುವದಕ್ಕೆ ಒಳ್ಳೆಯ ಕಾರಣಗಳಿರುವವೋ? ಇವೆಯೆಂದು ನಾವು ನಂಬುತ್ತೇವೆ. ಅವುಗಳಲ್ಲಿ ಕೆಲವನ್ನು ಈ ಪಾಠವು ವಿವರಿಸುತ್ತದೆ.

"ಆಂತರಿಕ ಪುರಾವೆಗಳು" ಎಂದು ನಾವು ಹೇಳುವಂಥವುಗಳನ್ನು ನಾವು ಮೊದಲು ಯೋಚಿಸೋಣ. ಪ್ರೇರೇಪಣೆಯ ತನ್ನ ಪುರಾವೆಯನ್ನು ಬೈಬಲು ತನ್ನ ಪುಟಗಳಲ್ಲಿ ಹೊಂದಿಕೊಂಡಿರುತ್ತದೆ. ಬೈಬಲಿನಲ್ಲಿ ನಿಮ್ಮ ವಿಶ್ವಾಸವನ್ನು ಬೆಳೆಸಿ ಕೊಳ್ಳುವ ಅತ್ಯುತ್ತಮ ಮಾರ್ಗಗಳಲ್ಲಿ ಒಂದು ಅದನ್ನು ಓದುವುದಾಗಿದೆ.

## ಬೈಬಲಿನ ಐಕ್ಯತೆ ಹಾಗೂ ಸಾಮರಸ್ಯತೆ

ಬೈಬಲ್ ಎಂದು ಕರೆಯಲ್ಪಡುವ ಗ್ರಂಥವು ಅರವತ್ತಾರು ಪುಸ್ತಕಗಳಿಂದ ರಚಿತಗೊಂಡಿರುವುದು. ಈ ಪುಸ್ತಕಗಳೆಲ್ಲವೂ ಒಂದೇ ಸಮಯದಲ್ಲಿ ಬರೆಯಲ್ಪಟ್ಟಿರುವದಿಲ್ಲ. ಸುಮಾರು ನಲ್ವತ್ತು ಬಿನ್ನವಾದ ಜನರಿಂದ ಸುಮಾರು ಹದಿನಾರುನೂರು ವರ್ಷಗಳಿಗಿಂತ ಹೆಚ್ಚು ಅವಧಿಯಲ್ಲಿ ಅವು ಬರೆಯಲ್ಪಟ್ಟಿವೆ. ಈ ಜನರು ಅನೇಕ ವಿಷಯಗಳ ಮೇಲೆ ಬರೆದರು. ವಿವಿಧ ಕೋನಗಳಿಂದ ಆ ವಿವರಗಳನ್ನು ವಿವರಿಸಿದರು. ಅಂತಿಮವಾಗಿ, ಪುಸ್ತಕಗಳೆಲ್ಲವು ಒಂದುಗೂಡಿಸಲ್ಪಟು ಒಂದು ಗ್ರಂಥವಾಗಿ ಮಾಡಲ್ಪಟ್ಟವು. ಒಬ್ಬನು ಓದುತ್ತಾ ಹೋಗುವಾಗ ಬೈಬಲು ಒಂದೇ ಪುಸ್ತಕವಾಗಿದೆಯೆಂಬ ಸಂಗತಿಯಿಂದ ಪ್ರಭಾವಿತನಾಗುತ್ತಾನೆ. ಸಾಮರ್ಥ್ಯ, ಐಕ್ಯತೆ ಹಾಗೂ ಏಕರೂಪತೆಯು ಗ್ರಂಥದಲ್ಲೆಲ್ಲ ಕಂಡುಬರುತ್ತದೆ. ದಾಖಲೆಗಳು ಒಂದಕ್ಕೊಂದು ವ್ಯತಿರಿಕ್ತವಾಗಿರುವದರ ಬದಲು

ಒಂದಕ್ಕೊಂದು ಪೂರಕವಾದವುಗಳೂ ಪುರವಣಿಯಾದವುಗಳೂ ಆಗಿವೆ.

ಇದೇ ರೀತಿಯಲ್ಲಿ ವಿಜ್ಞಾನಿಗಳ ಒಂದು ಗುಂಪು ಒಂದು ಪುಸ್ತಕ ರಚಿಸಲು ಪ್ರಯತ್ನಿಸುವರೆಂದು ತಿಳಿಯಿರಿ. ಪರಿಣಾಮವು ಏನಾಗಬಹುದೆಂದು ನೀವು ಯೋಚಿಸುವಿರಿ? ಅದು ಅಸಂಬದ್ಧತೆಗಳಿಂದ ತುಂಬಿರುತ್ತದೆ. ಹೌದು, ಅಷ್ಟು ವಿವಿಧ ಸನ್ನಿವೇಷಗಳಲ್ಲಿ ಹಾಗೂ ಅಷ್ಟು ಅನೇಕ ಭಿನ್ನ ಜನರಿಂದ ರಚಿಸಲ್ಪಟ್ಟರೆ ಪುಸ್ತಕದ ಐಕ್ಯತೆಯು ಈ ಜನರಿಗೆ ದೈವಿಕ ಮಾರ್ಗದರ್ಶನವಿತ್ತೆಂಬುದನ್ನು ಬಲವಾಗಿ ಪ್ರತಿಪಾದಿಸುತ್ತದೆ.

## ಪ್ರವಾದನೆಗಳು ಹಾಗೂ ಅವುಗಳ ನೆರವೇರುವಿಕೆ

ಬೈಬಲಿನ ವಾಚಕರಿಗೆ ಬಹಳವಾಗಿ ಪ್ರಭಾವಬೀರುವ ಆಂತರಿಕ ಪುರಾವೆಯ ವಿಷಯವು ಬಹುಶಃ ಬರಹಗಾರರಿಂದ ಪ್ರದರ್ಶಿಸಲ್ಪಟ್ಟ ಅಸಾಮಾನ್ಯವಾದ ಮುಂಚಿತವಾಗಿ ತಿಳಿದುಕೊಂಡ ವಿಷಯವಾಗಿದೆ. ಭವಿಷ್ಯದ ಘಟನೆಗಳನ್ನು ಅವರು ಅವುಗಳನ್ನು ಇತಿಹಾಸವನ್ನು ದಾಖಲೆ ಮಾಡುವಂತೆ ಖಚಿತವಾಗಿ ಬರೆದರು. ಪುರಾವೆಯ ಸರಪಣಿಯಲ್ಲಿ ಇದು ಬಲವಾದ ಕೊಂಡಿಯಾಗಿರುತ್ತದೆ. ಹಳೇ ಒಡಂಬಡಿಕೆಯ ಪರಿಶುದ್ಧ ಬರಹಗಳಲ್ಲಿ ಪ್ರವಾದನೆಗಳ ಮೂರು ಪ್ರಾಮುಖ್ಯವಾದ ಗುಂಪುಗಳಿವೆ.

### ರಾಷ್ಟ್ರಗಳ ಏಳುವಿಕೆ ಹಾಗೂ ಬೀಳುವಿಕೆ ಮತ್ತು ಪಟ್ಟಣಗಳ ನಾಶನಕ್ಕೆ ಸಂಬಂಧಿಸಿದ ಪ್ರವಾದನೆಗಳು

ಪ್ರವಾದಿಸಿದನಂತರ ಐದನೂರಕ್ಕಿಂತ ಹೆಚ್ಚು ವರ್ಷಗಳಾದ ನಂತರ ಯೆಹೋಶುವ 6:26 ನೆರವೇರಿತು. ಅದರ ನೆರವೇರುವಿಕೆಯನ್ನು 1 ಅರಸು 16:34ರಲ್ಲಿ ಓದುತ್ತೇವೆ. ನಹೂಮ ಹಾಗೂ ಜೆಫನ್ಯ ಇಬ್ಬರೂ ನಿನೆವೆಯ ನಾಶನವನ್ನು ಮುಂತಿಳಿಸಿದರು. ಬಬಿಲೋನಿನ ಪತನದ ಬಗ್ಗೆ ಯೆಶಾಯನು ಮುಂತಿಳಿಸಿದನು ಹಾಗೂ ಅರಸನು ಜನಿಸುವದಕ್ಕಿಂತ ಮೊದಲೇ ಕೋರೆಷನ ಹೆಸರನ್ನು ತಿಳಿಸಿದನು (ಯೆಶಾಯ 45:1). ಜಗತ್ತಿನ ಸಾಮ್ರಾಜ್ಯಗಳ ಒಂದರ ನಂತರ ಒಂದರ ಏಳುಬೀಳುಗಳ ಬಗ್ಗೆ ದಾನಿಯೇಲನು ಮುಂತಿಳಿಸಿದನು (ದಾನಿಯೇಲ 2). ಯೆರೂಸಲೇಮಿನ ನಾಶನವು ಸಂಭವಿಸುವದಕ್ಕಿಂತ ಮೊದಲೇ ಯೇಸು ಅದನ್ನು ವಿವರಿಸಿದುನು (ಮತ್ತಾಯ 24).

### ಯೆಹೂದಿ ಜನಾಂಗದ ಬಗ್ಗೆ ಪ್ರವಾದನೆಗಳು

ರಾಜ್ಯವು ಸ್ಥಾಪಿಸಲ್ಪಡುವ ಮುನ್ನೂರು ವರ್ಷಗಳ ಮೊದಲು ಇಸ್ರಯೇಲ ರಾಜ್ಯವು ಧರ್ಮೋಪದೇಶಕಾಂಡ 28:36ರಲ್ಲಿ ಮುಂತಿಳಿಸಲ್ಪಟ್ಟಿತು. ಇದೇ ವಾಕ್ಯವು ಸಂಭವಿಸುವದಕ್ಕಿಂತ ಎಂಟುನೂರು ವರ್ಷಗಳಿಗಿಂತ ಹೆಚ್ಚು ಮೊದಲು ಇದೇ ವಾಕ್ಯವು ಬಬಿಲೋನಿನ ಸೆರೆಯ ಬಗ್ಗೆ ಮುಂತಿಳಿಸಿತ್ತು. ಬೆರಗಿನ ಸಿಳ್ಳಿಗೆ ಗುರಿಪಡಿಸುವ ನಿತ್ಯ ನಾಶನದ ಬಗ್ಗೆ ಯೆರೆಮೀಯನು ಮುಂತಿಳಿಸಿದನು (ಯೆರೆಮೀಯ 25:9). ಇಸ್ರಾಯೇಲು ಭಯಾನಕತೆಗೂ ಅಪಹಾಸ್ಯಕ್ಕೂ ಒಳಗಾಗುವದೆಂದು ಮೋಶೆಯು ಪ್ರವಾದನೆ ಹೇಳಿದನು (ಧರ್ಮೋಪದೇಶಕಾಂಡ 28:37). ಇಸ್ರಯೇಲಿನ ಇತಿಹಾಸವು ಅನಂತರದ ಯುಗಗಳಲ್ಲಿ ಹಳೇ ಒಡಂಬಡಿಕೆಯ ಬರಹಗಾರರ ಪ್ರೇರೇಪಣೆಗೆ ಸಾಕ್ಷಿಕೊಡುವ ಬಲವಾದ ಧ್ವನಿಗಳಲ್ಲಿ ಒಂದಾಗಿತ್ತು.

**ಯೇಸುವಿನ ಬಗ್ಗೆ ಪ್ರವಾದನೆಗಳು**

ಸಾಮಾನ್ಯವಾಗಿ ಒಬ್ಬ ಮನುಷ್ಯನ ಆತ್ಮ ಚರಿತ್ರೆಯು ಅವನ ಮರಣದನಂತರ ಬರೆಯಲ್ಪಡುತ್ತದೆ. ಆದರೆ ಇಲ್ಲಿ ಒಬ್ಬಾತನ ಜೀವನ ಚರಿತ್ರೆಯು ಬಹಳವಾಗಿ ಆತನ ಜನನಕ್ಕಿಂತ ಮೊದಲು ಬರೆಯಲ್ಪಟ್ಟಿದೆ. ಹಳೇ ಒಡಂಬಡಿಕೆಯಲ್ಲಿ ನಜರೇತಿನ ಯೇಸುವನ್ನು ಕುರಿತು ನೂರಾರು ವಿವರಗಳಿರುತ್ತವೆ. ಈ ಪ್ರವಾದನೆಗಳು ಹಾಗೂ ಅವುಗಳ ಐತಿಹಾಸಿಕ ನೆರವೇರುವಿಕೆಯು ಹಳೇ ಒಡಂಬಡಿಕೆಯ ಪ್ರವಾದಿಗಳ ದೈವ ಪ್ರೇರಣೆಯನ್ನು ಮತ್ತು ಅವುಗಳನ್ನು ನೆರವೇರಿಸಿದ ಯೇಸುವಿನ ದೈವತ್ವವನ್ನು ಸಹ ಸಿದ್ಧ ಪಡಿಸಿ ತೋರಿಸುತ್ತವೆ. ಈ ಕೆಳಗಿನವುಗಳಲ್ಲಿ ಪ್ರತಿಯೊಂದನ್ನು ಕುರಿತು ನಾವು ಪ್ರವಾದ ನೆಗಳನ್ನು ಕಂಡುಕೊಳ್ಳುತ್ತೇವೆ.

1. ಆತನ ವಂಶಾವಳಿ (ಆದಿಕಾಂಡ 3:15; 12:3; 49:10; ಯೆಶಾಯ 11:1; ಯೆರೆಮೀಯ 23:5)
2. ಆತನ ಜನನ (ಯೆಶಾಯ 7:14; ಮೀಕ 5:2)
3. ಆತನ ಜೀವನ (ಯೆಶಾಯ 53:3-9; ಹೋಶೆಯ 11:1)
4. ಆತನ ಮರಣ (ಕೀರ್ತನೆ 22:16-18; 34:20; ಯೆಶಾಯ 53:9)
5. ಆತನ ಹೂಣಿಡುವಿಕೆ (ಯೆಶಾಯ 53:9)
6. ಆತನ ಪುನರುತ್ಥಾನ (ಕೀರ್ತನೆ 16:10)
7. ಆತನ ದಿವಾರೋಹಣ (ಕೀರ್ತನೆ 68:18)

ಹೀಗೆ ಯೇಸು ಭೂಲೋಕಕ್ಕೆ ಆಗಮಿಸುವ ಮೊದಲೇ ಆತನ ಜೀವನ ಚರಿತ್ರೆಯು ಬರೆಯಲ್ಪಟ್ಟಿರುವುದು. ಪ್ರವಾದಿಗಳಿಂದ ಮುಂದಿಡಲ್ಪಟ್ಟ ಬಲವಾದ ವಾದವನ್ನು ಅಲ್ಲಗ ಳೆಯುವ ಯಾವುದನ್ನಾದರೂ ನಾನೆಂದೂ ನೋಡಿರುವುದಿಲ್ಲ.

## ಬೈಬಲಿನ ಖಚಿತತೆ

ಬೈಬಲಿನ ಮತ್ತು ವಿಜ್ಞಾನದ ಬಗ್ಗೆ ಇತ್ತೀಚೆಗಿನ ವರ್ಷಗಳಲ್ಲಿ ಬಹಳವಾದದ್ದು ಹೇಳಲ್ಪಟ್ಟಿದೆ. ಬೈಬಲು ವೈಜ್ಞಾನಿಕ ಸತ್ಯಗಳೊಂದಿಗೆ ಒಪ್ಪಿಸಿಕೊಳ್ಳುವದಿಲ್ಲವೆಂದು ಕೇಳಿದ್ದರಿಂದ ಬೈಬಲನ್ನು ಪಕ್ಕಕ್ಕೆ ತಳ್ಳಿಬಿಡಲು ಸಿದ್ಧರಾಗಿದ್ದಾರೆ. ಇನ್ನೊಂದೆಡೆಯಲ್ಲಿ, ಬೈಬಲಿನ ಬೋಧನೆಗಳಿಗೂ ಹಾಗೂ ನಿಜವಾದ ವಿಜ್ಞಾನಕ್ಕೂ ಮಧ್ಯದಲ್ಲಿ ಯಾವುದೇ ಭಿನ್ನಾಭಿಪ್ರಾಯವನ್ನು ಕಂಡುಕೊಂಡಿರುವುದಿಲ್ಲ.

ಬೈಬಲ್ ಹಾಗೂ ವಿಜ್ಞಾನದ ಚರ್ಚೆಯಲ್ಲಿ ಎರಡು ವಿಷಯಗಳು ಸ್ಪಷ್ಟವಾಗಿರುತ್ತವೆ. ಮೊದಲನೆಯದು ಬೈಬಲು ಯಾವುದೇ ವೈಜ್ಞಾನಿಕ ತಪ್ಪುಗಳನ್ನು ಒಳಗೊಂಡಿರುವುದಿಲ್ಲ. ಮೊದಲ ವಿಚಾರಗಳಲ್ಲಿ ಇದು ಬೈಬಲಿನ ದೈವಪ್ರೇರಣೆಗಾಗಿ ಬಲವಾದ ಪುರಾವೆಯಾಗಿ ಕಾಣಲಿಕ್ಕಿಲ್ಲ. ಹೀಗಿದ್ದರೂ ಬೈಬಲು ಬರೆಯಲ್ಪಡುತ್ತಿದ್ದ ದಿನಗಳಲ್ಲಿ ಪ್ರಚಲಿತವಿದ್ದ ತಪ್ಪುಗ ಳನ್ನು ನಾವು ಜ್ಞಾಪಿಸಿ ಕೊಳ್ಳುವಾಗ, ಆ ಪುಸ್ತಕದಿಂದ ಅಂಥ ತಪ್ಪುಗಳು ಬಿಡಲ್ಪಟ್ಟದ್ದು ಒಂದು ರೀತಿಯ ಅಧ್ಭುತ ವಾದದ್ದಲ್ಲವೆಂದು ಒಪಿಕೊಳ್ಳಬೇಕು. ಬೈಬಲು ಏನನ್ನು ಒಳಗೊಂಡಿರುವುದಿಲ್ಲವೋ ಆ ಕಾರಣದಿಂದ ಅದನ್ನು ನಾನು ನಂಬುತ್ತೇನೆ. ಬರಹಗಾರರು ಪ್ರೇರೇಪಿತರಾಗಿರದಿದ್ದರೆ, ಈ ಬರಹಗಾರರ ಸಂಧರ್ಭಗಳಲ್ಲಿ ಬಹಳವಾಗಿದ್ದ ಸ್ಪಷ್ಟವಾದ ತಪ್ಪುಗಳೂ ಮೂರ್ಖ ವಿಚಾರಗಳೂ ಪರಿಶುದ್ಧ ಬರಹಗಳಲ್ಲಿ ನುಸುಳಿಕೊಳ್ಳದಿರುವುದು

ಹೇಗೆ ಸಂಭವಿಸಿತು? ಬೈಬಲಿನ ಬರಹಗಾರರು ತಮ್ಮ ದಿನದ ಜ್ಞಾನವನ್ನು ಸುಮ್ಮನೇ ದಾಖಲೆ ಮಾಡಿದವರು ಎಂಬ ವಿಚಾರವನ್ನು ಈ ಸಂಗತಿಯು ಖಂಡಿಸುತ್ತದೆ.

ಎರಡನೆಯದು, ಮಾನವ ಮನಸ್ಸಿನಿಂದ ಕಂಡುಹಿಡಿಯದೇ ಇದ್ದ ವೈಜ್ಞಾನಿಕ ಸತ್ಯಗಳನ್ನು ಸಹ ಬೈಬಲಿನ ಬರಹಗಾರರು ದಾಖಲೆ ಮಾಡಿದರು. ಗುಂಡಗಿರುವ ಭೂಮಿ, ಗುರುತ್ವಾಕರ್ಷಣ ನಿಯಮ ಹಾಗೂ ಉತ್ತರದಲ್ಲಿ ಖಾಲಿಯಾದ ಸ್ಥಳಗಳು ಕೆಲವು ಉದಾಹರಣೆಗಳಾಗಿವೆ (ಯೆಶಾಯ 40:22; ಯೋಬ 26:7). 2 ಪೇತ್ರ 1:21ರಲ್ಲಿ ಹೇಳಿದ ತೀರ್ಮಾನಕ್ಕೆ ನಾವು ಪುನಃ ಒತ್ತಾಯಿಸಲ್ಪಡುತ್ತೇವೆ. "ಯಾವ ಪ್ರವಾದನೆಯೂ ಎಂದೂ ಮನುಷ್ಯನ ಚಿತ್ತದಿಂದ ಉಂಟಾಗಲಿಲ್ಲ: ಮನುಷ್ಯರು ಪರಿಶುದ್ಧಾತ್ಮ ಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತಾಡಿದರು." ದೈವಿಕ ಪ್ರೇರಣೆಯ ಸಹಾಯವಿಲ್ಲದೇ ಮನುಷ್ಯರು ಈ ಸಂಗತಿಗಳನ್ನು ತಿಳಿದುಕೊಳ್ಳಲಾಗುತ್ತಿರಲಿಲ್ಲ. ಅವರು ಪರಿಶುದ್ಧಾತ್ಮನಿಂದ ಪ್ರೇರಿಸಲ್ಪಟ್ಟರು. ವಿಜ್ಞಾನದ ಬೆಳಕಿನಲ್ಲಿ ಬೈಬಲಿನ ಅಧ್ಯಯನದ ಬಗ್ಗೆ ಕೆಲವರು ಭಯಪಟ್ಟಿರುವರು. ಆದರೆ ಭಯಪಡುವಂಥದ್ದು ಬೈಬಲಿನಲ್ಲಿ ಇಲ್ಲ. ಮೊದಲಿಗಿಂತಲೂ ನಮಗೆ ಹೆಚ್ಚು ಅಮೂಲ್ಯವಾದ ಕುಲುಮೆಯಿಂದ ಅದು ಉದಯವಾಗುತ್ತದೆ.

## ಮುಕ್ತಾಯ

ಬೈಬಲ್ ಜಗತ್ತಿನ ಅತೀ ಹೆಚ್ಚಾಗಿ ಪ್ರೀತಿಸಲ್ಪಟ್ಟ ಪುಸ್ತಕವಾಗಿದೆ ಹಾಗೂ ಎಲ್ಲಾ ಕಾಲಗಳಲ್ಲಿ ಅತ್ಯುತ್ತಮವಾಗಿ ಹಂಚಲ್ಪಡುತ್ತಲಿದೆ. ಕೆಲವರು ಅದಕ್ಕಾಗಿ ಪ್ರಾಣ ಕೊಟ್ಟಿದ್ದರೂ ಅದು ಬಲವಾಗಿ ವಿರೋಧಿಸಲ್ಪಟ್ಟಿದೆ. ಅದು ನಿರ್ನಾಮವಾಗುವದೆಂದು ವೈರಿಗಳು ಮುಂತಿಳಿಸಿದ್ದಾರೆ. ಆದರೆ ಅದು ನಾಶವಾಗಿ ಹೋಗುವಂಥದ್ದಲ್ಲ. ಬೆಂಕಿ, ಖಡ್ಗ ಹಾಗೂ ಅದಕ್ಕೆ ವಿರೋಧವಾಗಿ ಬಂದ ಇತರ ಪ್ರತಿಯೊಂದು ಒತ್ತಡಗಳನ್ನು ಸಹಿಸಿ ಉಳಿದುಕೊಂಡಿದೆ.

ಬೈಬಲಿನ ವಯಸ್ಸು ಎಷ್ಟೇ ಆಗಿದ್ದರೂ ಅದು ಬಳಿಕೆಯಲ್ಲಿ ಇಲ್ಲದ್ದಾಗಲಿಲ್ಲ. ಅದಕ್ಕೆ ಎಂದೂ ಪುರವಣಿಯ ಅವಶ್ಯಕತೆಯಿಲ್ಲ. ಅದು ಪೂರ್ಣವಾಗಿ ಬೆಳೆದ ಪುಸ್ತಕವಾಗಿದೆ. ಎಲ್ಲಾ ಕಾಲಗಳ ಎಲ್ಲಾ ಜನರಿಗಾಗಿ ರೂಪಿಸಲ್ಪಟ್ಟಿದೆ. ಅದರ ದೈವಿಕ ಮೂಲಕ್ಕೆ ಇದು ಇನ್ನೊಂದು ಬಲವಾದ ಪುರಾವೆಯಾಗಿದೆ. ಇದು ಯಾವಾಗಲೂ ಸಮಂಜಸವಾದದ್ದಾಗಿದೆ. ಭೂಮ್ಯಾಕಾಶಗಳು ದಾಟಿ ಹೋದರೂ ದೇವರ ವಾಕ್ಯವು ಸದಾಕಾಲಕ್ಕೂ ನಿಲ್ಲುವುದು (ಯೆಶಾಯ 40:8; 1 ಪೇತ್ರ 1:25).

© 2009 Truth for Today